# ಆರೋಪಿ ಬಂಧನಕ್ಕೆ ಅಪಘಾತ ಕಥೆ ಹೆಣೆದ ಪೊಲೀಸರು!

## ಎಫ್‌ಡಿಎ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪಿ ಚಂದ್ರು ಬಂಧನದ ರಹಸ್ಯ | ಮನೆಯಲ್ಲಿ ಪ್ರಶ್ನೆ ಪತ್ರಿಕೆ ಸಮೇತ ಸಿಕ್ಕಿಬಿದ್ದ ತೆರಿಗೆ ಇಲಾಖೆ ಇನ್ಸ್‌ಪೆಕ್ಟರ್

• ಕನ್ನಡಪ್ರಭ ವಾರ್ತೆ ಬೆಂಗಳೂರು

ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ವಾಣಿಜ್ಯ ತೆರಿಗೆ ಇಲಾಖೆ ಇನ್ಸ್‌ಪೆಕ್ಟರ್ ಬಂಧಿಸಲು ಸಿಸಿಬಿ ಪೊಲೀಸರು ಬಲೆಗೆ ಬೀಳಿಸಿದ್ದ ರೋಚಕವಾಗಿದೆ.

ಆರೋಪಿ ಚಂದ್ರು ಗ್ಯಾಂಗ್ ಭಾನುವಾರ ನಡೆಯಬೇಕಿದ್ದ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದೆ ಎಂಬ ಖಚಿತ ಮಾಹಿತಿ ಮೇರೆಗೆ ಸಿಸಿಬಿ ತಂಡ ಕಾರ್ಯಾಚರಣೆಗೆ ಇಳಿದಿತ್ತು. ಕೂಡಲೇ ಚಂದ್ರು ವಾಸವಿದ್ದ ಜ್ಞಾನಭಾರತಿ ಸಮೀಪದ ಉಲ್ಲಾಳದ ಬಳಿಯಿದ್ದ 4 ಅಂತಸ್ತಿನ ಅಪಾರ್ಟ್‌ಮೆಂಟ್ ಬಗ್ಗೆ ಮಾಹಿತಿ ಕಲೆ ಹಾಕಿತ್ತು.

ಇತ್ತ ಆರೋಪಿ ವಾಸವಿದ್ದ ಅಪಾರ್ಟ್‌ಮೆಂಟ್ ಬಳಿ ಪೊಲೀಸರು ಹೋಗಿದ್ದರೂ ಆತನಿದ್ದ ಫ್ಲ್ಯಾಟ್ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಹೀಗಾಗಿ ಪೊಲೀಸರು ಪ್ರತಿಯೊಂದು ಫ್ಲ್ಯಾಟನ್ನು ಗಮನಿಸಿದ್ದರು. ಆದರೆ ಈ ಪೈಕಿ ಎರಡನೇ ಮಹಡಿಯಲ್ಲಿ ಕರ್ಟನ್ ನಿಂದ ಮನೆ ಹೊರ ಭಾಗವನ್ನು ಮುಚ್ಚಲಾಗಿತ್ತು. ಅನುಮಾನಗೊಂಡ ಪೊಲೀಸರು ಎರಡು ತಾಸು ಮನೆಯಿಂದ ಯಾರಾದರೂ ಹೊರ ಬರುತ್ತಾರೆಯೇ? ಎಂದು ಕಾದು ಕುಳಿತಿದ್ದರು. ಕೊನೆಗೆ ಮಫ್ತಿಯಲ್ಲಿದ್ದ ಪೊಲೀಸರು ಚಂದ್ರು ಫ್ಲ್ಯಾಟ್‌ನ ಬಾಗಿಲು ಬಡಿದರು. ಬಾಗಿಲು ತೆರೆದ ಆರೋಪಿಯ ತಾಯಿಗೆ ಪೊಲೀಸರು 'ನಿಮ್ಮ ಮಗ ಚಂದ್ರು, ಮಾರ್ಗ ಮಧ್ಯೆ ಬೇರೊಬ್ಬರ ವಾಹನಕ್ಕೆ ಗುದ್ದಿ ಬಂದಿದ್ದಾನೆ. ನಮ್ಮ ವಾಹನ ಡ್ಯಾಮೇಜ್ ಆಗಿದೆ' ಎಂದು ಹೇಳಿ ಮನೆಯೊಳಗಡೆ ಹೋಗಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ ತಾಯಿ 'ಮಗ ಮನೆಯಲ್ಲಿ ಇಲ್ಲ. ಅಪಘಾತ ಮಾಡಿದ್ದಕ್ಕೆ ನಾನೇ ಹಣ ಕೊಡುವೆ' ಎಂದಿದ್ದಾರೆ. ಮನೆಗೆ ನಿಮ್ಮ ಮಗ ಬಂದಿರುವುದನ್ನು ನಾವು ನೋಡಿದ್ದೇವೆ ಎಂದು ಹೇಳಿ ಕೊಠಡಿಯೊಳಗೆ ಹೋಗಿದಾಗ ಪ್ರಶ್ನೆಪತ್ರಿಕೆ ಸಮೇತ ಚಂದ್ರು ಸಿಕ್ಕಿ ಬಿದ್ದಿದ್ದಾನೆ. ಚಂದ್ರು ತಂದೆ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವುದನ್ನು ಅರಿತಿದ್ದ ಸಿಸಿಬಿ, ಆಕ್ಸಿಡೆಂಟ್ ಕತೆ ಕಟ್ಟಿ ಉಪಾಯದಿಂದ ಚಂದ್ರುವನ್ನು ಬಂಧಿಸಿದೆ.

ಆರೋಪಿಯಿಂದ ಪ್ರಶ್ನೆ ಪತ್ರಿಕೆ ಪಡೆದ ಅಭ್ಯರ್ಥಿಗಳಿಗೆ ಚಂದ್ರು, ಬಳಿಯಿದ್ದ ಮೊಬೈಲ್ ಮೂಲಕವೇ ಸಿಸಿಬಿ ವೇಣುಗೋಪಾಲ್ ಕರೆ ಮಾಡಿಸಿದ್ದರು. ಪ್ರಶ್ನೆ ಪತ್ರಿಕೆ ಸಂಬಂಧ ತುರ್ತು ಮಾತನಾಡುವುದಿದೆ. ನಾನು ಹೇಳುವ ಜಾಗಕ್ಕೆ ಬನ್ನಿ ಎಂದು ಆತನ ಮೂಲಕ ಹೇಳಿಸಿ 12 ಅಭ್ಯರ್ಥಿಗಳನ್ನೂ ಸಿಸಿಬಿ ಪೊಲೀಸರು ತಾವಿದ್ದಲ್ಲಿಗೆ ಕರೆಸಿ ವಶಕ್ಕೆ ಪಡೆದಿದ್ದಾರೆ ಎಂದು ತಿಳಿದು ಬಂದಿದೆ.

# ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ 14 ಅರೆಸ್ಟ್

● ಮೊದಲ ಪುಟದಿಂದ

ಆರೋಪಿಗಳಿಂದ ₹35 ಲಕ್ಷ ನಗದು ಹಾಗೂ 4 ವಾಹನ ಜಪ್ತಿ ಮಾಡಲಾಗಿದೆ. ಕೆಪಿಎಸ್‌ಸಿ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ದ್ವಿತೀಯ ದರ್ಜೆ ಸಹಾಯಕ (ಎಸ್‌ಡಿಎ) ರಮೇಶ್ ಅಲಿಯಾಸ್ ರಾಮಪ್ಪ ಎಂಬಾತನನ್ನು ಬಾಗಲಕೋಟೆ ಜಿಲ್ಲೆಯಲ್ಲಿ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್ ತಿಳಿಸಿದ್ದಾರೆ.

ಆರೋಪಿಗಳ ಜೊತೆ ರಮೇಶ್ ಹೆಚ್ಚು ಒಡನಾಟವಿಟ್ಟುಕೊಂಡಿದ್ದ. ಈತನಿಂದಲೇ ಪ್ರಶ್ನೆ ಪತ್ರಿಕೆ ಹೊರಗೆ ಹೋಗಿದೆ ಎಂಬ ಬಲ ವಾದ ಅನುಮಾನ ವ್ಯಕ್ತವಾಗಿದೆ. ಎಫ್‌ಡಿಎ ಪರೀಕ್ಷೆ ಕಟ್ಟಿದ್ದ ರಮೇಶ್ ಸಹ ಭಾನುವಾರ ಪರೀಕ್ಷೆ ಬರೆಯಬೇಕಿತ್ತು. ಅದಕ್ಕಾಗಿ ಆತ, ಬೇರೆ ಊರಿಗೆ ಹೋಗಿರುವ ಶಂಕೆ ಇದೆ. ಈ ಹಿನ್ನೆಲೆಯಲ್ಲಿ ಆತನನ್ನು ವಶಕ್ಕೆ ಪಡೆಯಲಾಗಿದೆ. ಅಲ್ಲದೆ, ಇತರ ಮೂವರು ಕೆಪಿಎಸ್‌ಸಿ ಸಿಬ್ಬಂದಿ ಬಗ್ಗೆ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಅಗತ್ಯ ಬಿದ್ದರೆ ಇನ್ನಿಬ್ಬರು ಸಿಬ್ಬಂದಿ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು. ಬಂಧಿತರ ಪೈಕಿ ವಾಣಿಜ್ಯ ತೆರಿಗೆ ಇಲಾಖೆ ಇನ್ಸ್‌ಪೆಕ್ಟರ್ ಚಂದ್ರು ಮಾತ್ರ ಸರ್ಕಾರಿ ನೌಕರ. ಉಳಿದ 13 ಮಂದಿಯೂ ಎಫ್‌ಡಿಎ ಪರೀಕ್ಷೆ ಬರೆಯಬೇಕಿದ್ದ ಅಭ್ಯರ್ಥಿಗಳಾಗಿದ್ದಾರೆ. ಬೆಂಗಳೂರು, ದೊಡ್ಡಬಳ್ಳಾಪುರ, ಬೆಳಗಾವಿ, ಶಿವಮೊಗ್ಗ, ಮೈಸೂರು, ಅಥಣಿ ಹಾಗೂ ತುಮಕೂರು ಮೂಲದವರಾಗಿದ್ದಾರೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

### ಲೋಕಸೇವಾ ಆಯೋಗದ ಕಚೇರಿಯಿಂದಲೇ ಪ್ರಶ್ನೆ ಪತ್ರಿಕೆ ಸೋರಿಕೆ?

ಪ್ರಥಮ ದರ್ಜೆ ಸಹಾಯಕರ (ಎಫ್‌ಡಿಎ) ನೇಮಕಾತಿಯ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ)ದ ಕಚೇರಿಯಿಂದಲೇ ಆಗಿದೆ ಎಂಬ ಸಂಶಯ ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿದೆ. ಪ್ರಕರಣ ಸಂಬಂಧ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು ಕೆಪಿಎಸ್‌ಸಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯ ಮಾಹಿತಿ ನೀಡುವಂತೆ ಕೋರಿದ್ದು, ಕೆಪಿಎಸ್‌ಸಿ ಸಿಬ್ಬಂದಿ ರೂಮ್‌ನಿಂದ ಪೇಪರ್ ಕಳುವಾಗಿದೆ ಎಂಬ ಆರೋಪವಿದೆ. ಕೆಪಿಎಸ್‌ಸಿ ನಡೆಸಿರುವ ಹಲವು ಪರೀಕ್ಷೆಗಳಲ್ಲಿ ಅಕ್ರಮ ನಡೆದಿವೆ. ಈ ಬಗ್ಗೆ ಆ ಮೂಲಗಳ ಸೂಚನೆಯಿದ್ದರೂ ನೇಮಕಾತಿ ಬಗ್ಗೆ ಕಾಳಜಿವಹಿಸುವವರು ಮುಂದಾಗಿಲ್ಲ. ಈ ಅಕ್ರಮವೂ ಕೆಪಿಎಸ್‌ಸಿ ಸಿಬ್ಬಂದಿಯಿಂದಲೇ ನಡೆದಿದೆ ಎಂದು ಹಲವು ಉದ್ಯೋಗಾಕಾಂಕ್ಷಿಗಳು ದೂರಿದ್ದಾರೆ.

**ಅನ್ಯರ ಹೆಸರಿನಲ್ಲಿ ಸಿಮ್‌ಕಾರ್ಡ್:** ಪ್ರಶ್ನೆ ಪತ್ರಿಕೆ ಲೀಕ್ ಮಾಡಿದ ಮೊದಲ ಹಂತದ ವ್ಯಕ್ತಿಯಿಂದ ಪ್ರಶ್ನೆ ಪತ್ರಿಕೆ ಪಡೆಯುತ್ತಿದ್ದ ಚಂದ್ರು, ಎರಡನೇ ಹಂತದ ಡೀಲರ್ ಆಗಿದ್ದ. ಪರಿಚಯಸ್ಥರನ್ನು ಮಧ್ಯವರ್ತಿ ಮಾಡಿ ಕೊಂಡೇ ಆರೋಪಿ ಚಂದ್ರು ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆ ಕೊಡುತ್ತಿದ್ದ. ತನ್ನ ಸುಳಿವು ಸಿಗಬಾರದು ಎಂಬ ಕಾರಣಕ್ಕೆ ವಾಟ್ಸ್‌ಆ್ಯಪ್, ಆನ್‌ಲೈನ್‌ನಲ್ಲಿ ವ್ಯವಹಾರ ನಡೆಸುತ್ತಿರಲಿಲ್ಲ. ಅನ್ಯ ವ್ಯಕ್ತಿಗಳ ಹೆಸರಿನ ದಾಖಲೆಗಳನ್ನು ಬಳಸಿಕೊಂಡಿದ್ದ ಆರೋಪಿ, ಅವರ ಹೆಸರಿನಲ್ಲೇ ಪ್ರತ್ಯೇಕ ಸಿಮ್‌ಕಾರ್ಡ್ ಖರೀದಿಸಿದ್ದ ಎಂದು ತಿಳಿದು ಬಂದಿದೆ. ಅಲ್ಲದೆ, ಚಂದ್ರುಗೆ ವಿವಾಹ ನಿಶ್ಚಯವಾಗಿದ್ದು, ಇನ್ನೆರಡು ತಿಂಗಳಿನಲ್ಲಿ ಮದುವೆಯಾಗಬೇಕಿತ್ತು. ಇತ್ತೀಚೆಗೆ ಆರೋಪಿ ಉಲ್ಲಾಳದ ಬಳಿ ಫ್ಲ್ಯಾಟ್‌ವೊಂದನ್ನು ಕೂಡ ಖರೀದಿ ಮಾಡಿದ್ದ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ. ವಾಣಿಜ್ಯ ತೆರಿಗೆ ಇಲಾಖೆಯ ಇನ್ಸ್‌ಪೆಕ್ಟರ್ ಟಿ.ಎಸ್. ಚಂದ್ರು ಮನೆ ಮೇಲೆ ಶನಿವಾರ ದಾಳಿ ನಡೆಸಿದ್ದ ಸಿಸಿಬಿ ಪೊಲೀಸರು, ಪ್ರಶ್ನೆಪತ್ರಿಕೆ ಸೋರಿಕೆ ಜಾಲ ಪತ್ತೆ ಮಾಡಿ ಎಂಟು ಮಂದಿಯನ್ನು ಬಂಧಿಸಿದ್ದರು.

**ಸೋರಿಕೆ ಖಂಡಿಸಿ ಎಬಿವಿಪಿ ಪ್ರತಿಭಟನೆ:** ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು ಭಾನುವಾರ ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆ ಹಿಂದೆ ವ್ಯಾಪಕ ಭ್ರಷ್ಟಾಚಾರ ನಡೆದಿರುವ ಗುಮಾನಿ ಇದೆ ಎಂದು ದೂರಿದ್ದಾರೆ.